ಮಾಡಿಕೊಂಡು ಧರೆಗುರುಳುತ್ತಿತ್ತು. ಈಗಲೂ ಅದು ಸೋಜಿಗವೇ! ಅಷ್ಟು ದೊಡ್ಡ ಮ್ಯಾಜಿಕ್ಕನ್ನು ಅಷ್ಟು ಸುಲಭವಾಗಿ ಹೇಗೆ ಮಾಡುತ್ತಿದ್ದ? ಅಥವಾ ನಿಜಕ್ಕೂ ದೇವರೊಡನೆ ಮಾತಾಡುತ್ತಿದ್ದನೋ?

ನನ್ನ ಬಾಲ್ಯದ ಎಲ್ಲ ಘಟನೆಗಳೂ ನಾಗಣ್ಣನ ಜೊತೆ ತಳಕು ಹಾಕಿ ಕೊಂಡಿದ್ದವು. ನಾಯಿ ಮರಿ ಹಾಕುವ ಸೀಜನ್ ಬಂದರೆ ಸಾಕು, ನನಗೂ ಅವನಿಗೂ ಏನೋ ಉತ್ಸಾಹ. ಎಲ್ಲಿ, ಯಾವ ನಾಯಿ ಮರಿ ಹಾಕಿದೆ, ಅದರಲ್ಲಿ ಗಂಡೆಷ್ಟು, ಹೆಣ್ಣೆಷ್ಟು ಎಂಬುದೆಲ್ಲ ಅವನಿಗೆ ಕರಾರುವಾಕ್ಕಾಗಿ ಗೊತ್ತಿತ್ತು. ತಾಯಿ ನಾಯಿ ಇಲ್ಲದೆ ಇದ್ದಾಗ ಸದ್ದಿಲ್ಲದೆ ಹೋಗಿ ಒಂದು ಚೆನ್ನಾಗಿರುವ ಮರಿ ಎತ್ತಿಕೊಂಡು ಬಂದು ಬಿಡುತ್ತಿದ್ದೆವು.

'ನೋಡು, ಇದು ಜಾತಿ ಮರಿ. ಪಾದ ನೋಡು, ಎಷ್ಟು ಅಗಲವಾಗಿದೆ! ಕಿವಿ ಜೋಲು ಬೀಳದಿದ್ದರೆ, ಅದು ಗ್ಯಾರಂಟಿ ಕಳ್ಳರನ್ನ ಹಿಡಿಯೋ ನಾಯಿ, ತಿಳ್ಕೊ.'

ನಾಗಣ್ಣ ಅಂದ್ರೆ ನಾಯಿ ಶಾಸ್ತ್ರ ಪಂಡಿತ! ಬೆಳಿಗ್ಗೆ ಎಲ್ಲ ಅಪ್ರತಿಮ ನಾಯಿ ಸಾಕಣೆದಾರರಾಗಿದ್ದ ನಮಗೆ ನಿಜವಾದ ಪೀಕಲಾಟ ಶುರುವಾಗ್ತಿದ್ದದ್ದು ರಾತ್ರಿಗೇ. ತಾಯಿಯಿಂದ ದೂರವಾದ ನಾಯಿ ಮರಿ ರಾತ್ರಿಯೆಲ್ಲ ಜೋರಾಗಿ ಕೂಗಲು ಪ್ರಾರಂಭಿಸುತ್ತಿತ್ತು. ಮನೆಯಲ್ಲಿ ಎಲ್ಲರೂ ನಮ್ಮನ್ನು ಬಯ್ಯುವವರೇ. ಅವರು ಅದನ್ನು ಎಲ್ಲಾದರೂ ದಾರೀಲಿ ಬಿಟ್ಟು ಬಿಟ್ಟರೆ ಎಂಬ ಭಯ ನನಗೆ. ಇಂಥ ಸನ್ನಿವೇಶಕ್ಕೂ ನಾಗಣ್ಣ ತಯಾರಿದ್ದ. ಬೆಳಗಿನಿಂದ ನಾವು ಮುದ್ದಾಡಿ ಜತನದಿಂದ ಪಾಲಿಸಿದ್ದ ನಾಯಿ ಮರಿಯನ್ನು ರಾತ್ರಿ ಹನ್ನೊಂದು ಹನ್ನೆರಡು ಗಂಟೆ ವೇಳೆಗೆ ನಿಶ್ಶಬ್ದವಾಗಿ ಅದರ ಅಮ್ಮನ ಬಳಿ ಸೇರಿಸಿ ಬರುತ್ತಿದ್ದೆವು. ಮಾರನೆಯ ದಿನ ರಾತ್ರಿಯೂ ಅಳದೇ ಇರುವ ಹೊಸ ನಾಯಿ ಮರಿಯ ತಲಾಷು! ನಾಗಣ್ಣ ಬೇಜಾರು ಮಾಡಿಕೊಂಡ ದಿನವೇ ಇಲ್ಲ!

ನನಗೆ ಚೆನ್ನಾಗಿ ನೆನಪಿದೆ. ನಾನು ತುಂಬ ಹಟ ಮಾಡಿದೆ ಅಂತ ಯಾರಿಗೋ ದುಡ್ಡು ಕೊಟ್ಟು ಹತ್ತಾಳು ಉದ್ದದ ತೆಂಗಿನ ಮರ ಹತ್ತಿಸಿ ಪೊಟರೆಯಲ್ಲೆಲ್ಲೊ ಇದ್ದ ಪುಟಾಣಿ ಗಿಣಿ ಮರಿಯನ್ನು ಹಿಡಿಸಿ ಕೊಟ್ಟಿದ್ದ. ಆದರೆ, ಅದು ಏನು ತಿನ್ನುತ್ತದೆ ಅಂತ ಅವನಿಗೂ ಗೊತ್ತಿರಲಿಲ್ಲ.

ಒಮ್ಮೆ ಹಾಲು, ಒಂದೊಮ್ಮೆ ಹಣ್ಣಿನ ಚೂರು, ಕೆಲವೊಮ್ಮೆ ಪುಟ್ಟ ಪುಟ್ಟ ಹುಳುಗಳು! ಆದರೂ ನಾಲ್ಕಾರು ದಿನದ ನಂತರ ಅದು ಸತ್ತು ಹೋಯಿತು.

ನಾನು ಹಾಸಿಗೆಯಲ್ಲಿ ಹೊರಳಿದೆ. ಮಗ್ಗಲಾದೆ. ಹೀಗೆ ಚಿಕ್ಕವರಿದ್ದಾಗ ಬಣ್ಣದ ಕಾಮನಬಿಲ್ಲು ಸೃಷ್ಟಿಸುತ್ತಿದ್ದ ನಾಗಣ್ಣ ಹಾಗೇ ಉಳಿದು ಹೋದ. ಅಪೂರ್ವ ಹಳೆಯ ಶಿಲ್ಪ ಕಲಾಕೃತಿಯಂತೆ. ನಾವು ಮಾತ್ರ ದೊಡ್ಡವರಾಗುತ್ತಿದ್ದ ಹಾಗೇ ಬದಲಾದೆವು. ದೊಡ್ಡವರಾದೆವು. ದೊಡ್ಡ ಮನುಷ್ಯರಾದೆವೆ? ಗೊತ್ತಿಲ್ಲ.

★★★

ನಮ್ಮ ಅಣ್ಣನಿಗಿಂತ ನನಗೇ ಮೊದಲು ಕೆಲಸ ಸಿಕ್ಕಿದ್ದು. ಅದೂ ಮನೆಯ ಮುಂದೆಯೇ. ಚಿಕ್ಕದೊಂದು ಕಚೇರಿ. ಆಫೀಸಿನ ಬೈಕು, ಪುಟ್ಟದೊಂದು ಸಂಬಳ.

'ರಾಜನಿಗೆ ಇನ್ನೂ ಕೆಲಸ ಸಿಕ್ಕಿಲ್ಲ. ಪ್ರತಿ ಸಾರಿಯೂ ದುಡ್ಡು ಕೇಳಲು ಸಂಕೋಚ ಮಾಡ್ಕೋತಾನೆ. ತಿಂಗಳಿಗೆ ಒಂದಿನ್ನೂರು ರೂಪಾಯಿ ಅವನಿಗೂ ಕೊಡೋ' ಅಂದಿದ್ದಳು ಅಮ್ಮ. ಅವತ್ತಿನಿಂದ ನಮ್ಮಣ್ಣನಿಗೆ ಕೆಲಸ ಸಿಗುವವರೆಗೂ ಪ್ರತಿ ತಿಂಗಳೂ ಅವನಿಗೋಸ್ಕರ ಇನ್ನೂರು ರೂಪಾಯಿ ಅಮ್ಮನ ಬಳಿ ಕೊಟ್ಟು ಬಿಡುತ್ತಿದ್ದೆ. ಆಫೀಸಿನ ಬೈಕಿನಲ್ಲಿ ಎಲ್ಲರಿಗೂ ಬೈಕ್ ಓಡಿಸುವುದನ್ನು ಕಲಿಸಿದೆ. ನಾಗಣ್ಣ ಮಾತ್ರ ಕಲಿಯಲಿಲ್ಲ. ನಾವು ನಕ್ಕೆವು. ಅವನೂ ನಕ್ಕು ಬಿಟ್ಟ.